**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :30 ಸಿಡಬ್ಲು :43

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ರಾಮಚಂದ್ರ ಕುರಾಡೆ |
| ತಾಯಿಯ ಹೆಸರು | : | ಶ್ರೀಮತಿ. ದ್ರೌಪದಿ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 04-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 8 ರಿಂದ ಚಾಸಾಃ 34 ರವರು ನನಗೆ ಗೊತ್ತಿರುತ್ತಾರೆ. ಚಾಸಾಃ 35 ಚೇಫ್ ಆಫೀಸರ, ಚಾಸಾಃ 36 ರಿಂದ ಚಾಸಾಃ 39 ಗೊತ್ತಿರುತ್ತಾರೆ. ಆರೋಪಿತರು ಗೊತ್ತಿರುತ್ತಾರೆ.

2. ನಮ್ಮೂರಿನ ಮಾದರ ಓಣಿಯ ಯಲ್ಲಮ್ಮ ದೇವಿಯ ಪಾದುಗಟ್ಟೆಯ ಬಳಿ ಇರುವ ಖುಲ್ಲಾ ಜಾಗದ ಬಗ್ಗೆ ನನಗೆ ಗೊತ್ತಿರುತ್ತದೆ. ಆ ಜಾಗ ಮೂಲತಃ ಬಾಬನ್ನವರ ಅವರ ನಾಲ್ಕು ತಲಮಾರಿನ ಆಸ್ತಿಯಾಗಿರುತ್ತದೆ. ದಿನಾಂಕಃ 26-08-2017 ರಂದು ಬಾಬನ್ನವರ ಅವರು [ಆರೋಪಿತರು] ಕಟ್ಟಡ ಕಟ್ಟಲು ಕಬ್ಬಿಣದ ಸರಳುಗಳನ್ನು ಹಾಕಿ ಕಾಲಂಗಳನ್ನು ಕಟ್ಟುತ್ತಿದ್ದರು. ಕಟ್ಟಡ ಕಟ್ಟುತ್ತಿದ್ದ ಸ್ಥಳದಲ್ಲಿ ಪ್ರಕಾಶ ಎನ್ನುವ ಹುಡುಗ ಜಾರಿ ಬಿದ್ದನು. ಪ್ರಕಾಶ ಕೆಳಗೆ ಬಿದ್ದಿದ್ದರಿಂದ ಆತನನ್ನು ಜೈನ ಸಮಾಜದವರು ಹೊಡೆಯುತ್ತಿದ್ದಾರೆ ಎಂದು ಹೇಳಿ 40-50

ಜನ ಮಾದರ ಸಮಾಜದವರು ಸ್ಥಳಕ್ಕೆ ಬಂದಿದ್ದರು. ಮಾದರ ಸಮಾಜದವರು ಸರ್ಕಾರಿ ಸ್ಥಳದಲ್ಲಿ ಕಟ್ಟಡ ಏಕೆ ಕಟ್ಟುತ್ತಿದ್ದೀರಿ ಎಂದು ಆರೋಪಿತರೊಂದಿಗೆ ಜಗಳ ತೆಗೆದರು. ನಾನು ತೋಟದಿಂದ ನಮ್ಮ ಓಣಿಗೆ ಹೋಗುವಾಗ ನೋಡಿದ್ದೇನೆ.

3. ಮಾದರ ಸಮಾಜದವರು ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಮಾದರ ಸಮಾಜದವರು ಆರೋಪಿತರಿಗೆ ಕಬ್ಬಿಣದ ಸರಳು, ಬಡಿಗೆ ಮತ್ತು ಕಲ್ಲುಗಳಿಂದ ಹೊಡೆಯುತ್ತಿದ್ದರು. ವಿವಾದಿತ ಸ್ಥಳದಲ್ಲಿ ಆರೋಪಿತರು ಮಾದರ ಸಮಾಜದವರಿಗೆ ಎರಡು ಪ್ಲಾಟ್‌ಗಳನ್ನು ಕೊಟ್ಟಿದ್ದು, ಅದು ಪ್ರತ್ಯೇಕವಾಗಿರುತ್ತದೆ.

4. ಚಾಸಾಃ 1 ಬಸಪ್ಪ ಅವರು ನೇಮನ್ನ ಬಾಬನ್ನವರ ಅವರಿಗೆ ಬಿದಿರು ಬಡಿಗೆಯಿಂದ ಹೊಡೆದರು. ಅರಿಹಂತ ಬಾಬನ್ನವರ ಅವರಿಗೆ ವಿಠ್ಠಲ ಎನ್ನುವವರು ಹೊಡೆದರು. ಪುನ್ನಂಜಿ ಅವರಿಗೆ ಶಿವನಿಂಗ ಬಾವಿಮನಿ ಅವರು ಹೊಡೆದರು. ಶ್ರೀಕಾಂತ ಮಾರ್ತಾಂಡ ಬಾಬನ್ನವರ ಅವರಿಗೆ ಜಯವಂತ ಮಾದರ ಅವರು ಕಲ್ಲಿನಿಂದ ಹೊಡೆದರು. ಮಿಲನ ದೇವನ್ನವರ ಅವರಿಗೆ ಪತ್ರಕರ್ತರು ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದರು. ಗಲಾಟೆಯಲ್ಲಿ ಎರಡೂ ಸಮಾಜದವರಿಗೆ ಗಾಯಗಳಾಗಿದ್ದವು. ಸ್ಥಳದಲ್ಲಿ ಸುಮಾರು ನೂರಾರು ಜನ ಸೇರಿದ್ದರು. ಮಾದರ ಜನಾಂಗದವರು ಹೆಚ್ಚು ಜನ ಇದ್ದರು ಮತ್ತು ಬಾಬನ್ನವರ ಕಡೆಯಿಂದ 10-15 ಜನ ಇದ್ದರು. ಈ ಎರಡೂ ಜನಾಂಗದವರನ್ನು ಹೊರತುಪಡಿಸಿ ಸ್ಥಳದಲ್ಲಿ ಬೇರೆ ಜನಾಂಗದವರು ಇರಲಿಲ್ಲ.

5. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು ಸ್ಥಳಕ್ಕೆ ಹೋದಾಗ ಬೆಳಗ್ಗೆ 10:30 ರಿಂದ11:00ಗಂಟೆ ಆಗಿತ್ತು ಎನ್ನುವುದು ಸರಿ. ವಿವಾದಿತ ಸ್ಥಳದಲ್ಲಿ ಮಾದರ ಸಮಾಜದವರು ಸಮುದಾಯ ಭವನ ಕಟ್ಟಬೇಕೆಂದು ನಿರ್ಧರಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕಃ 28-08-2017 ರಂದು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ " ಆ ಜಾಗೆಯಲ್ಲಿ ಮಾದಿಗ ಜನರು ತಮ್ಮ ಸಮುದಾಯ ಭವನ ಕಟ್ಟಬೇಕು ಎಂದು ತಕರಾರು ಮಾಡಿದ್ದರು. " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-20 ಎಂದು ಗುರುತಿಸಲಾಯಿತು. " ಅಲ್ಲಿ ಬಾಹುಬಲಿ ಹುಲ್ಲೋಲ್ಲಿ ಮತ್ತು ಹುಲ್ಲೋಳ್ಳಿ ಮನೆತನದ ಇನ್ನೂ ಕೆಲವು ಜನರು " ಇದ್ದರು ಎಂದು ಹೇಳಿದ್ದೇನೆ ಎಂದು ಗುರುತಿಸಲಾಯಿತು. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-20[ಎ] ಎಂದು ಗುರುತಿಸಲಾಯಿತು. " ಅಲ್ಲಿ ಪುರಸಭೆಯ ಚೀಫ್ ಆಫೀಸರ ಮತ್ತು ಅಧ್ಯಕ್ಷರು ಇದ್ದರು " ಎಂದು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-20 [ಬಿ] ಎಂದು ಗುರುತಿಸಲಾಯಿತು. " ಅವರೆಲ್ಲರೂ ಬಾಬನ್ನವರಿಗೆ ಕೆಲಸ ಬಂದ್ ಮಾಡಿರಿ ಎಂದಾಗ ಎರಡೂ ಪಾರ್ಟಿ ಜನರಲ್ಲಿ ಬಾಯಿಗೆ ಬಾಯಿ ತಂಟೆ ಶುರುವಾಯಿತು, ಮಾದಿಗರಲ್ಲಿ ಒಬ್ಬನು ಜಾರಿ ಬಿದ್ದನು, ಅಲ್ಲಿ ಎರಡೂ ಪಾರ್ಟಿ ಜನರ ನಡುವೆ ಜಗಳ ಪ್ರಾರಂಭವಾಗಿ ಕಲ್ಲು ತೂರಾಟ ನಡೆಯಿತು, ಇದರಿಂದಾಗಿ ಎರಡೂ ಪಾರ್ಟಿ ಜನರಿಗೆ ಗಾಯ ಆಗಿರುತ್ತದೆ. "ಎಂದು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-20 [ಸಿ] ಎಂದು ಗುರುತಿಸಲಾಯಿತು.

2. ಎರಡೂ ಪಾರ್ಟಿಯವರು ಪರಸ್ಪರ ಹೊಡೆದಾಡಿದ್ದರಿಂದ ಎರಡೂ ಪಾರ್ಟಿಯವರಿಗೆ ಗಾಯಗಳಾಗಿರುತ್ತವೆ, ನಾನು ಅದನ್ನು ನೋಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದ ಹಾಗೂ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.